**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

ಸಿ.ಸಿ. ನಂ. : 2400/2019 ದಿನಾಂಕಃ 13.08.2025

ಪಿ ಡಬ್ಲೂ : 1

-------------------------------------------------------------------------------------------

**13.08.2025:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

**ಪಾಟೀ ಸವಾಲುಃ ಆರೋಪಿ ಪರ ಶ್ರೀ . ಎಮ್. ಕೆ. ಪಿ. ವಕೀಲರಿಂದಃ**

ನಾನು ಶಾಲೆ ಕಲೆತಿರುವುದಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ. ಬ್ಯಾಂಕಿಗೆ ಸಂಬಂಧಸಿದಂತೆ ಕೊಡುವುದು ಮತ್ತು ತೆಗೆದುಕೊಳ್ಳುವುದರ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾರಿಗೆ ಸಾಲ ಕೊಡುವುದು ಮತ್ತು ತೆಗೆದುಕೊಳ್ಳುವುದನ್ನು ಬ್ಯಾಂಕ ಮೂಲಕ ಮಾಡುವುದಿಲ್ಲ. ಕೈಗಡ ಅಂತ ಕೊಡುತ್ತೇನೆ. ನಾನು ಲಾರಿ ಡ್ರೈವರ್ ಇರುತ್ತೇನೆ. ಶ್ರೀಪಾದ ಭೀಮಪ್ಪ ಅಡಹಳ್ಳಿ ಅವರು ಸಾಕೀನ ಅಥಣಿ ಇವರ ಲಾರಿಯನ್ನು ನಾನು ಓಡಿಸುತ್ತೇನೆ. ಅದರ ನಂಬರ ಕೆ ಎ 22-5522. ಲಾರಿ ಓಡಿಸುವುದಕ್ಕಾಗಿ ನನಗೆ ತಿಂಗಳ ರೂ.10,000/- ಸಂಬಳ ಕೊಡುತ್ತಾರೆ. ನನಗೆ ಒಬ್ಬಳೆ ಮಗಳು ಇರುತ್ತಾಳೆ, ಅವಳ ಹೆಸರು ವೈಶಾಲಿ. ವೈಶಾಲಿ ಅವಳ ಗಂಡನ ಹೆಸರು ಶಶಿಕಾಂತ. ನನ್ನ ಅಳಿಯ ವಕೀಲ ವೃತ್ತಿ ಮಾಡುತ್ತಾರೆ. ನನ್ನ ಅಳಿಯ 10-12 ವರ್ಷಗಳಿಂದ ವಕೀಲ ವೃತ್ತಿಯನ್ನು ಅಥಣಿಯಲ್ಲಿ ಮಾಡುತ್ತಿದ್ದಾರೆ. ಜೈಯಪ್ಪ ನನ್ನ ಸಹೋದರ ಆಗಬೇಕು. ಜಯಪ್ಪನಿಗೆ ಆನಂದ ಎನ್ನುವ ಮಗ ಮತ್ತು ಪೂಜಾ ಎನ್ನುವ ಸೊಸೆ ಇರುತ್ತಾಳೆ ಅವಳ ಹೆಸರು ಮಹಾನಂದಾ ಎಂದರೆ ಸರಿಯಲ್ಲ. ಆನಂದ ಇವನು 2ನೇ ನ್ಯಾಯಾಲಯದಲ್ಲಿ ಸಿ.ಸಿನಂ.1964/2020 ಮತ್ತು ಈ ನ್ಯಾಯಾಲಯದಲ್ಲಿ ಸಿ.ಸಿ.ನಂ. 3507/2019 ಎಂದು ಎರಡು ಚೆಕ್ ಬೌನ್ಸ ಕೇಸ ಪ್ರಕರಣ ದಾಖಲಿಸಿರುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆನಂದನ ಹೆಂಡತಿ ಮಹಾನಂದ 2 ನೇ ಅಧಿಕ ದಿವಾಣಿ ನ್ಯಾಯಾಲಯದಲ್ಲಿ ಸಿ .ಸಿ. ನಂ.5423/2021 ಎಂದು ಪ್ರಸ್ತುತ ಆರೋಪಿಯ ಮೇಲೆ ಚೆಕ್ ಬೌನ್ಸ ಪ್ರಕರಣ ದಾಖಲಿಸಿರುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾವು ಮತ್ತು ಎಲ್ಲ ಅಣ್ಣತಮ್ಮಂದಿರೂ ಒಟ್ಟಿಗೆ ಕೂಡಿ ಇದ್ದು ಅವರು ಸಹ ದುಡಿಯುತ್ತಾರೆ. ನಮ್ಮ ವ್ಯವಹಾರ ನಾವು ಮಾಡುತ್ತೇವೆ , ನಮ್ಮ ಅಣ್ಣತಮ್ಮಂದಿರೂ ತಮ್ಮ ತಮ್ಮ ವ್ಯವಹಾರಗಳ್ನು ತಾವೇ ನೋಡಿಕೊಳ್ಳುತ್ತಾರೆ.

2. ರೂ.10,000/- ಸಂಬಳದಲ್ಲಿ ಖರ್ಚುಗಳನ್ನು ತೆಗೆದು ರೂ.1-2 ಸಾವಿರ ಹಣ ಉಳಿತಾ ಮಾಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಸಂಬಳ ರೂ.10,000/- ಇದ್ದು ಅದನ್ನೆಲ್ಲಾ ನಾನು ಉಳಿತಾಯ ಮಾಡುತ್ತೇನೆ. ಆರೋಪಿಯು ಗೌಸಿಲದನಮಾಡ್ಡಿಯಲ್ಲಿ ಇರುತ್ತಾಳೆ ಎಂದರೆ ಸರಿ. ಆರೋಪಿತ ಕುಟುಂಬದ ಬಗ್ಗೆ ಪರಿಚಯದ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ಕುಟುಂಬದ ಬಗ್ಗೆ ಪರಿಚಯ ಇಲ್ಲ ಆದರೆ ಆರೋಪಿಯ ಗಂಡ ಟ್ರಕ್ ಡ್ರೈವರ ಇರುವುದರಿಂದ ಅವರು ನನ್ನೊಂದಿಗೆ ಕೆಲಸ ಮಾಡುವುದರಿಂದ ಅವರು ಮಾತ್ರ ಪರಿಚಯ ಇರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿಯು ಪರಿಚಯ ಇರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಆದರೆ ಆರೋಪಿಯ ಗಂಡ ಡ್ರೈವರ ಇರುವುದರಿಂದ ಆಕೆಯ ಗಂಡನಿಂದಾಗಿ ಆರೋಪಿಯು ನನಗೆ ಪರಿಚಾಯಳಾಗಿರುತ್ತಾಳೆ ಎಂದು

ನುಡಿಯುತ್ತಾರೆ. ಆರೋಪಿಗೆ ಇಬ್ಬರೂ ಮಕ್ಕಳು ಮತ್ತು ಅತ್ತೆ ಮಾವ ಇರುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಮನೆ ಕೆಲಸ ಮಾಡುತ್ತಾಳೆ ಎಂಬುದು ನನಗೆ ಗೊತ್ತಿಲ್ಲ. 2018 ರಲ್ಲಿ ರೂ.3,00,000/- ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಸಾಕ್ಷಿಯು ತಾರೀಕು ಸರಿಯಾಗಿ ನೆನಪಿಲ್ಲ, ಆದರೆ ದಿಃ 24 ಇರಬಹುದು ಎಂದು ನುಡಿಯುತ್ತಾರೆ. ನನ್ನ ತಮ್ಮ KSRTC ಡ್ರೈವರ್ ಇದ್ದು ಅವನು ಮೃತನಾದ ನಂತರ ಅವನ ಹೆಸರಿನಲ್ಲಿ ಬಂದಿದ್ದ ಹಣವನ್ನು ಆರೋಪಿಗೆ ಸಾಲವಾಗಿ ಕೊಟ್ಟಿರುತ್ತೇನೆ. 2017 ನೇ ಇಸ್ವೀಯಲ್ಲಿ ನನ್ನ ತಮ್ಮ ಮೃತನಾಗಿದ್ದು ಅದೇ ಇಸ್ವೀಯಲ್ಲಿ ಹಣ ಬಂದಿರುತ್ತದೆ. KSRTC ಯವರು ಚೆಕ್ ಮುಖಾಂತರ ಹಣ ಕೊಟ್ಟಿದ್ದರು. ಸದರಿ ಹಣವು ನನ್ನ ವೈನಿ ಹೆಸರಿನಲ್ಲಿ ಜಮಾ ಆಗಿತ್ತು. ರೂ.3,00,000/- ಹಣವನ್ನು ನನ್ನ ವೈನಿ ತನ್ನ ಬ್ಯಾಂಕಿನೀಂದ ಹಣವನ್ನು ತೆಗೆದು ಕೊಟ್ಟಿರುತ್ತಾಳೆ. ಸಿದ್ದವ್ವ ಅಂದರೆ ನನ್ನ ವೈನಿ ಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡು ಬಂದ ಎರಡು ದಿವಸದೊಳಗಾಗಿ ನಾವು ಆರೋಪಿಗೆ ಸಾಲವನ್ನು ಕೊಟ್ಟಿರುತ್ತೇವೆ. ಸಿದ್ದವ್ವ ಬ್ಯಾಂಕೀನಿಂದ ಹಣ ತೆಗೆದುಕೊಂಡ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸಿದ್ದಪ್ಪ ಶಿವನೂರ, ಕುಮಾರ ಶಿಕಲಗಾರ ಎಂಬ ಇಬ್ಬರ ಸಾಕ್ಷಿಗಳ ಸಮಕ್ಷಮ ಆರೋಪಿ ಮತ್ತು ಆಕೆಯ ಗಂಡನ ಸಮಕ್ಷಮ ಹಣ ಕೊಟ್ಟಿರುತ್ತೇನೆ. ರೂ.3,00,000/- ಹಣವು 500 ರೂಪಾಯಿ ಮುಖ ಬೆಲೆಯುಳ್ಳ ನೋಟುಗಳು ಇದ್ದವು.

3. ಆರೋಪಿಯ ಗಂಡನದ್ದು ಅಪಘಾತದಲ್ಲಿ ಕಾಲು ಮುರಿದುವುದರಿಂದ ಚಿಕಿತ್ಸೆಗಾಗಿ ಹಣ ಬೇಕೆಂದು ನನ್ನ ಬಳಿ ಬಂದಿದ್ದರು. ಸಾಕ್ಷಿದಾರರು ನನಗೆ ಪರಿಚಯ ಇರುತ್ತಾರೆ. ವಕೀಲರಿಂದ ಕೊಟ್ಟ ನೋಟಿಸಿನಲ್ಲಿ ಮತ್ತು ನನ್ನ ಪಿರ್ಯಾದಿನಲ್ಲಿ ಆರೋಪಿಯ ಗಂಡನದ್ದು ಅಪಘಾತದಲ್ಲಿ ಕಾಲು ಮುರಿದುವುದರಿಂದ ಚಿಕಿತ್ಸೆಗಾಗಿ ಹಣ ಬೇಕೆಂದು ನನ್ನ ಬಳಿ ಬಂದಿದ್ದರು ಎನ್ನುವ ವಿಷಯವನ್ನು ನಾನು ಬರೆಸಿರುವುದಿಲ್ಲ. ಆರೋಪಿತರ ಪರಿಚಯ ಆಕೆಯ ಗಂಡನಿಂದ ಆಗಿದೆ ಎನ್ನುವುದು ಸಹ ನೋಟಿಸಿನಲ್ಲಿ ಮತ್ತು ಪಿರ್ಯಾದಿನಲ್ಲಿ ಬರೆಸಿರುವುದಿಲ್ಲ. ಆರೊಪಿಗೆ ನಾನು ಯಾವುದೇ ಬಡ್ಡಿಯ ವ್ಯವಹಾರವಾಗಿ ಹಣ ಕೊಟ್ಟಿರುವುದಿಲ್ಲ, ಆರು ತಿಂಗಳ ಒಳಗಾಗಿ ಮರಳಿ ಕೊಡುತ್ತೇನೆ ಎಂದು ಹೇಳಿದ್ದಕ್ಕೆ ಹಣ ಕೊಟ್ಟಿರುತ್ತೇನೆ. ಬೇರೆ ಯಾರಾದರು ಅಡಚಣೆ ಎಂದು ಹೇಳಿಕೊಂಡು ಬಂದರೆ ನಾನು ಹಣ ಕೊಡುವುದಿಲ್ಲ. ಆರೋಪಿಗೂ ನನಗೂ ಯಾವುದೇ ರೀತಿಯ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನಿನ್ನ ತಮ್ಮನ ಹೆಂಡತಿ ಸಿದ್ದವ್ವನೇ ನೇರವಾಗಿ ಆರೊಪಿಗೆ ಹಣ ಕೊಡಬಹುದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯು ಸಿದ್ದವ್ವಳಿಗೆ ಪರಿಚಯ ಇರಲಿಲ್ಲ ಎಂದು ನುಡಿಯುತ್ತಾರೆ. ಆನಂದ 2 ನೇ ಅಧಿಕ ದಿವಾಣಿ ನ್ಯಾಯಾಲಯದಲ್ಲಿ ಶಬಾನಾ ವಿರುದ್ದ ಪ್ರಕರಣ ದಾಖಲಿಸಿದ್ದು ಶಬಾನಾ ಇವಳಿಗೂ ಮತ್ತು ಪ್ರಸ್ತುತ ಆರೋಪಿಗೂ ಪರಿಚಯ ಇರುವುದರ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ಶಬಾನಾ ಕಡೆಯಿಂದ ರೂ.10,000/- ಹಣ ತೆಗೆದುಕೊಂಡಿದ್ದರಿಂದ ಶಬಾನಾಗೆ ಒಂದು ಚೆಕ್ ಕೊಟ್ಟಿದ್ದಳು ಎಂಬ ವಿಷಯ ನನಗೆ ಗೊತ್ತಿಲ್ಲ. ಆರೋಪಿ ಶಬಾನಾಗೆ ರೂ.10,000/- ಹಣ ಮರಳಿ ಕೊಟ್ಟಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ಮತ್ತು ಶಬಾನಾ ಯಾರು ಎಂಬ ಬಗ್ಗೆ ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಶಬಾನಾಗೆ ಕೊಟ್ಟ ಚೆಕ್ ನ್ನು ಶಬಾನಾ ನನಗೆ ಕೊಟ್ಟಿದ್ದಳು ಎಂದರೆ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಆರೋಪಿಯು ಕೊಡಬೇಕಾದ ಹಣವನ್ನು ಕೊಟ್ಟು ತನ್ನ ಖಾತೆಯನ್ನು ಮುಚ್ಚಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ICICI ಬ್ಯಾಂಕಿಗೆ ಆರೋಪಿಯು ಚೆಕ್ ನ್ನು ಕೊಟ್ಟಿರುತ್ತಾಳೆ. ಆರೋಪಿಯು ರೂ. 3,00,000/- ಲಕ್ಷ ಎಂದು ಬರೆದು ಚೆಕ್ ಮೇಲೆ ಇಂಗ್ಲಿಷ ನಲ್ಲಿ ಸಹಿ ಮಾಡಿ ಕೊಟ್ಟಿರುತ್ತಾಳೆ. ಸಹಿಗೂ ಮತ್ತು ಚೆಕ್ ಮೇಲೆ ಬರೆದ ಶಬ್ದಗಳಿಗೂ ಶಾಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಆರೋಪಿಯೆ ಅದನ್ನು ಬರೆದುಕೊಂಡು ಬಂದಿರುತ್ತಾಳೆ ಎಂದು ನುಡಿಯುತ್ತಾರೆ. ಚೆಕ್ ಮೇಲಿನ ದಿನಾಂಕ, ಮೊತ್ತ ಇವುಗಳನ್ನು ನೀವೇ ಬರೆದಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಬರೆಯಲು ಬರೆದಿರುವುದಿಲ್ಲ ಆರೋಪಿಯೆ ಬರೆದುಕೊಂಡು ಬಂದಿರುತ್ತಾಳೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನಿಂದ ಹಣ ತೆಗೆದುಕೊಂಡಿಲ್ಲ ಮತ್ತು ನಾನು ಚೆಕ್ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಮುಲ್ಲಾ ಟ್ರಾನ್ಸಪೊರ್ಟ ಇದರಲ್ಲಿ ಕೆಲಸ ಮಾಡುವುದರಿಂದ ರೂ.15,000/- ಸಂಬಳ ಪಡೆಯುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಯಾವುದೇ ಆರ್ಥಿಕ ಅಡಚಣೆ ಇಲ್ಲಿಯವರೆಗೂ ಬಂದಿಲ್ಲ ಎಂದರೆ ಸರಿಯಲ್ಲ. ಯಾವ ಅಡಚಣೆ ಸಲುವಾಗಿ ಆರೋಪಿಯು ನಿಮ್ಮ ಹತ್ತಿರ ಹಣ ಕೇಳಿ ಬಂದಿದ್ದಳು ಎಂಬ ವಿಷಯವನ್ನು ನೀವು ಫಿರ್ಯಾದಿಯಲ್ಲಿ ಬರೆಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅಡಚಣೆ ಇತ್ತು ಎಂದು ಹೇಳಿದ್ದಳು ಎಂದು ನುಡಿಯುತ್ತಾರೆ. ಹಣದ ಅಡಚಣೆ ಸಲುವಾಗಿ ಬಂದಿದ್ದರು ಆದರೆ ಯಾವ ಅಡಚಣೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ದವಾಖಾನೆ ಅಡಚಣೆ ಇರಬಹುದು ಎಂದು ನುಡಿಯುತ್ತಾರೆ.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ಪ್ರಕರಣವು 2019 ರಲ್ಲಿ ದಾಖಲಿಸಿರುವುದರಿಂದ ದಿಃ 05-04-2024 ರಿಂದ ಈ ಪ್ರಕರಣವನ್ನು ಪಾಟೀ ಸವಾಲಿಗಾಗಿ ಮುಂದುಡುತ್ತಾ ಬಂದಿದ್ದು ಸುಮಾರು 1 ವರ್ಷ ಪಾಟೀ ಸವಾಲಿಗಾಗಿ ಮುಂದುಡುತ್ತಾ ಬಂದಿದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೊಡಲು ಯಾವುದೇ ಕಾರಣ ಕಂಡು ಬಂದಿರುವುದಿಲ್ಲ. ಆದ್ದರಿಂದ ವಕೀಲರ ಕೋರಿಕೆಯನ್ನು ತಿರಸ್ಕರಿಸಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.